**<u>ದಿನಾಂಕಃ 27-06-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎಫ್.ಎಂ.ಎಂ. ವಕೀಲರಿಂದಃ</u>**

ನನಗೆ ಓದಲು-ಬರೆಯಲು ಬರುವುದಿಲ್ಲ. ನನ್ನ ಸಹೋದರ ಬಸಪ್ಪ ಸಹ ವಿದ್ಯಾಭ್ಯಾಸ ಮಾಡಿರುವುದಿಲ್ಲ. 2 ಮತ್ತು 3ನೇ ಪ್ರತಿವಾದಿಗಳು ವಿದ್ಯಾಭ್ಯಾಸ ಮಾಡಿರುವುದಿಲ್ಲ. ದಾವೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನನ್ನ ತಕರಾರಿನಲ್ಲಿ ಏನು ಬರೆಯಲಾಗಿದೆ ಎಂದು ಸ್ವಂತ ಮಾಹಿತಿ ಇರುವುದಿಲ್ಲ. ನಮ್ಮದು 03 ಎಕರೆ 05 ಗುಂಟೆ ಜಮೀನು ಇರುತ್ತದೆ. ಆ ಬಗ್ಗೆ ಈ ದಾವಾ ಸಲ್ಲಿಸಿರುತ್ತೇವೆ. ಇದಲ್ಲದೇ ಮನೆ ಮತ್ತು ಬೈಲು ಜಾಗ ಇರುತ್ತದೆ. ಈ ಆಸ್ತಿಗಳು ನಮ್ಮ ತಂದೆ ತೀರಿಕೊಂಡ ನಂತರ ವಾರಸಾ ಪ್ರಕಾರ ನಮಗೆ ಬಂದಿರುತ್ತವೆ ಎಂದರೆ ನಿಜ. ಈ ಆಸ್ತಿಗಳು ನಾನು ನನ್ನ ಸಹೋದರರು ಹಿಸ್ಸೆ ಮಾಡಿಕೊಂಡಿರುವುದಿಲ್ಲ, ಜಂಟಿಯಾಗಿ ಇರುತ್ತವೆ. ನನ್ನ ತಂದೆಯ ತಂದೆ ಹೆಸರು ನಿಂಗಪ್ಪ ಬಟ್ಟಲಕಟ್ಟಿ ಎಂದರೆ ನಿಜ. ಅವರ ಹೆಂಡತಿ ಹೆಸರು ಅಡಿವೆಮ್ಮ ಇರುತ್ತದೆ. ಅವರಿಗೆ 3 ಜನ ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಎಂದರೆ ಸರಿಯಲ್ಲ. ಇಬ್ಬರು ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಮೊದಲನೇಯವರು ಗೌರವ್ವ, ಸಾವಂತ್ರವ್ವ ಎಂದರೆ ಸರಿಯಲ್ಲ ಗಂಗಮ್ಮ, ಚಿಕ್ಕಪ್ಪ, ಭೀಮಪ್ಪ ಮತ್ತು ಕೊನೆಯವರು ಗಂಗಮ್ಮ ಎಂದರೆ ನಿಜ. ಈ 5 ಜನರ ತಹಶೀಲ್ದಾರ ಕಚೇರಿಯಲ್ಲಿ ಜನನ ಪ್ರಮಾಣ ಪತ್ರ ಲಭ್ಯ ಇದೆ ಎಂದರೆ 4 ಜನರದ್ದು ಇದೆ ಎಂದು ಹೇಳತ್ತಾರೆ. ಇವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಂಗಪ್ಪನ ಮಕ್ಕಳು ಜೀವಂತ ಇರುವುದಿಲ್ಲ, ಅವರ ಮೊಮ್ಮಕ್ಕಳು ಇರುತ್ತಾರೆ. ಗೌರಮ್ಮನ ಗಂಡನ ಹೆಸರು ನಿಂಗಪ್ಪ ಶಿವಣ್ಣನವರ ಎಂದು ಇರುತ್ತದೆ. ಅವರು ಹಾಲಿ ಶಾಸಕರ ಸಂಬಂಧಿ ಎಂದರೆ ನಿಜ. ಗಂಗಮ್ಮನನ್ನು ಕಜ್ಜರಿಗೆಕೊಟ್ಟು ಮದುವೆ ಮಾಡಲಾಯಿತು. ಗೌರಮ್ಮ ಮತ್ತು ಗಂಗಮ್ಮ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ನಿಂಗಪ್ಪ ಮತ್ತು ಅಡಿವೆಮ್ಮರವರಿಗೆ ಎಷ್ಟು ಮಕ್ಕಳು ಎಂದು ಮಾಹಿತಿ ಇರುತ್ತದೆ. ನಮ್ಮ ಘರಾಣಕ್ಕೆ ಸಂಬಂದ ಪಟ್ಟಂತೆ ಹೇಳವರು ಇರುತ್ತಾರೆ. ಅವರು ಕುಟುಂಬ ಸದಸ್ಯರ ಮಾಹಿತಿ ಪಡೆದು ಕುಟುಂಬದಲ್ಲಿ ಮೃತಪಟ್ಟವರ, ಜನಿಸಿದವರ ಮತ್ತು ಮದುವೆ ಆದವರ ಮಾಹಿತಿ ಪಡೆದು ತಮ್ಮ ಪುಸ್ತಕದಲ್ಲಿ ಬರೆದುಕೊಂಡು ನಮ್ಮ ಕಡೆಯಿಂದ

ಹಣ ಪಡೆದು ಹೋಗುತ್ತಾರೆ ಎಂದರೆ ನಿಜ. ನಮ್ಮ ಘರಾಣೇದ ಹೆಳವರು ಯಾರು ಎಂದು ಗೊತ್ತಿರುವುದಿಲ್ಲ. ನಮ್ಮ ಬಟ್ಟಲಕಟ್ಟಿ ವಂಶದಲ್ಲಿ ನನ್ನಗಿಂತ ಹಿರಿಯರು ಇರುವುದಿಲ್ಲ. ಹಾವೇರಿ ತಾಲೂಕಿನ ಚಿಕ್ಕಲಿಂಗದಹಳ್ಳಿಯಲ್ಲಿ ಕುರುಬ ಜನಾಂಗದವರು ಹೆಚ್ಚು ಇದ್ದಾರೆ ಎಂದರೆ ನಿಜ. ನಾವು ಸಹ ಕುರುಬ ಜನಾಂಗದವರು ಇರುತ್ತೇವೆ. ನಮ್ಮ ಕುರುಬ ವಂಶಸ್ಥರಿಂದ ಚಿಕ್ಕಲಿಂಗದಹಳ್ಳಿಯಲ್ಲಿ ಕನ್ಯೆ ಕೊಡುವುದು ತೆಗೆದುಕೊಳ್ಳುವುದು ಮಾಡುತ್ತೇವೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಂಗಪ್ಪ ಬಟ್ಟಲಕಟ್ಟಿಯವರ 2ನೇ ಮಗಳು ಸಾವಂತ್ರನನ್ನು ಚಿಕ್ಕಲಿಂಗದಹಳ್ಳಿಯ ಪಕಿಕ್ಕರಪ್ಪ ಕಳಗೊಂಡರವರಿಗೆ ಕೊಟ್ಟು ಮದುವೆ ಮಾಡಲಾಯಿತು ಎಂದರೆ ಸರಿಯಲ್ಲ. ಈ ವಿಷಯವನ್ನು ಒಪ್ಪಿಕೊಂಡರೆ ನಮಗೆ ಅನಾನುಕೂಲವಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾವಂತ್ರರಿಗೆ ನಾಗಪ್ಪ, ಮಾರ್ತಾಂಡಪ್ಪ, ಲಕ್ಷ್ಮಣ ಮತ್ತು ಲಿಂಗಪ್ಪ ಮಕ್ಕಳು ಎಂದರೆ ಸರಿಯಲ್ಲ. ನಾಗಪ್ಪನ ಹೆಂಡತಿ ಹೆಸರು ಶಾರದಮ್ಮ ಎಂದರೆ ಸರಿಯಲ್ಲ. ಅವರಿಗೆ ಮಂಗಳವ್ವ, ಅಂಜನೇಪ್ಪ, ಯಲ್ಲಮ್ಮ, ಗುಡ್ಡಪ್ಪ, ಪಾರ್ವತಿ ಮತ್ತು ಸರಸ್ವತಿ ಮಕ್ಕಳು ಎಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿ ಕುರುಬ ದೈವ ಇದೆ ಎಂದರೆ ನಿಜ. ಆದರ ಸದಸ್ಯರು ಯಾರು ಇರುತ್ತಾರೆ ಎಂದು ಗೊತ್ತಿರುವುದಿಲ್ಲ. ಅವರಲ್ಲಿ ಕನ್ಯೆ ಕೊಟ್ಟಿದ್ದು ತೆಗೆದುಕೊಂಡಿದ್ದರ ಬಗ್ಗೆ ದಾಖಲು ಇದೆ ಎಂದರೆ ಸರಿಯಲ್ಲ. ಕುರುಬರ ಪಾದಗಟ್ಟಿ ಸ್ಥಳವು ನಮಗೆ ಸೇರಿದ್ದು ಎಂದು ಮಲ್ಲಪ್ಪ ಬ್ಯಾಡಗಿಯವರು ದೈವ ಸದಸ್ಯರ ಮೇಲೆ ವ್ಯಾಜ್ಯ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಬಸಪ್ಪ ನನಗೆ ಅಣ್ಣ ಆಗಬೇಕು.

**ಮುಂದುವರೆದ ಪಾಟೀ ಸವಾಲುಃ**

ಕೋರಿಕೆ ಮೇರೆಗೆ ಮುಂದೂಡಲಾಗಿದೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.